## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ

**ಎಸ್.ಸಿ. 5013/2026**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ದೊಡ್ಡಮಾದಶೆಟ್ಟಿ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಕೆಂಪಶೆಟ್ಟಿ | **30.06.2026** |
| **ವಯಸ್ಸು** | : | 36 ವರ್ಷ | |
| **ವೃತ್ತಿ** | : | ಚಾಲಕ | **ಫ್ರಾ.ಸಾಃ 1** |
| **ವಾಸ ಸ್ಥಳ** | : | ಕುಣಗಳ್ಳಿ | **ಚಾ.ಸಾಃ 1** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ 2 ನನ್ನ ತಾಯಿ. ನನಗೆ ಆರೋಪಿತರು ಗೊತ್ತು. ಮೃತ ಉದಯಕುಮಾರ್ ನನ್ನ ತಮ್ಮ. 1 ನೇ ಆರೋಪಿ ನನ್ನ ತಮ್ಮನ ಹೆಂಡತಿ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ತಾಯಿ ಮತ್ತು ತಂದೆ. 1 ನೇ ಆರೋಪಿಯು 4 ನೇ ಆರೋಪಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಳು.

ನಾವು ನಮ್ಮ ತಂದೆ ತಾಯಿಗೆ 3 ಜನ ಮಕ್ಕಳು. ನಾನು ಮೊದಲನೇ ಮಗ. ಮೃತ ಉದಯಕುಮಾರ್ 2 ನೇ ಮಗ. 3 ನೇ ರೇಖಾ ನನ್ನ ತಂಗಿ. ನಾನು ಮತ್ತು ನನ್ನ ತಮ್ಮ ಒಟ್ಟಾಗಿ ವಾಸವಿದ್ದೇವು. ದಿಃ 06.06.2019 ರಂದು ನನ್ನ ತಮ್ಮ ಉದಯಕುಮಾರ್ ಮತ್ತು 1 ನೇ ಆರೋಪಿಯ ವಿವಾಹ ನೇರವೇರಿರುತ್ತದೆ. ವಿವಾಹವಾದ ನಂತರ ನಾನು, ನನ್ನ ತಮ್ಮ ಮತ್ತು 1 ನೇ ಆರೋಪಿ ಎಲ್ಲರು ಒಟ್ಟಾಗಿ ವಾಸವಿದ್ದೆವು. ಮದುವೆಯಾದ ನಂತರ ನನ್ನ ತಮ್ಮ ಮತ್ತು 1 ನೇ ಆರೋಪಿ 1 ವರ್ಷದ

ವರೆಗೆ ಚೆನ್ನಾಗಿದ್ದರು. ಅವರಿಗೆ ಒಂದು ಹೆಣ್ಣು ಮಗು ಜನಿಸಿತು. ಆಕೆಯ ಹೆಸರು ನೀರಿಕ್ಷಾ. ನಂತರ 1 ನೇ ಆರೋಪಿಯು 4 ನೇ ಆರೋಪಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾಳೆ ಎಂದು ನನ್ನ ತಮ್ಮ ಮತ್ತು ಆಕೆಯೊಂದಿಗೆ ಜಗಳ ಆಗುತ್ತಿತ್ತು. ನಾನು 1 ನೇ ಆರೋಪಿಗೆ ಬುದ್ದಿ ಹೇಳಿದೆ. ಆಗ 1 ನೇ ಆರೋಪಿಯು ನಾನು ನಿಮ್ಮ ಜೊತೆ ಮನೆಯಲ್ಲಿ ಇರುವುದಿಲ್ಲ, ಬೇರೆ ಬಾಡಿಗೆ ಮನೆ ಮಾಡಿ ಎಂದು ನನ್ನ ತಮ್ಮನಿಗೆ ಹೇಳುತ್ತಿದ್ದಳು. 1 ನೇ ಆರೋಪಿಯ ವಿಚಾರವನ್ನು ಆಕೆಯ ತಂದೆ ತಾಯಿಯಾದ 2 ಮತ್ತು 3 ನೇ ಆರೋಪಿತರಿಗೆ ತಿಳಿಸಿದಾಗ ಅವರು 1 ನೇ ಆರೋಪಿಗೆ ಸಪೋರ್ಟ ಮಾಡಿದರು. 1 ನೇ ಆರೋಪಿಯ ವಿಚಾರದಲ್ಲಿ ಮತ್ತು ಆಕೆಗೆ 2 ಮತ್ತು 3 ನೇ ಆರೋಪಿತರು ಸಪೋರ್ಟ ಮಾಡುತ್ತಿರುವ ವಿಚಾರದಲ್ಲಿ ನನ್ನ ತಮ್ಮ ಮಾನಸಿಕವಾಗಿ ಹಿಂಸೆಗೆ ಒಳಗಾಗಿದ್ದನು. ನಾನು ಈ ವಿಚಾರವನ್ನು ಗ್ರಾಮದ ಮುಖ್ಯಸ್ಥರಿಗೆ ತಿಳಿಸಿದೆ. ಚಾಸಾ 3 ರಿಂದ 8 ರವರು ಗ್ರಾಮದ ಮುಖ್ಯಸ್ಥರಾಗಿದ್ದರು. ಗ್ರಾಮದ ಮುಖ್ಯಸ್ಥರು 1 ನೇ ಆರೋಪಿಗೆ ಚೆನ್ನಾಗಿ ಬಾಳಾಟ ಮಾಡುವಂತೆ ಮತ್ತು 4 ನೇ ಆರೋಪಿಯ ಜೊತೆಗೆ ಇರುವ ಅಕ್ರಮ ಸಂಬಂಧವನ್ನು ಬಿಟ್ಟುಬಿಡುವಂತೆ ಬುದ್ದಿ ಹೇಳಿದರು. ಆದರೆ 1 ನೇ ಆರೋಪಿಯು ನನ್ನ ತಮ್ಮನ ಜೊತೆ ಮನೆಗೆ ಬರಲಿಲ್ಲ. ದಿಃ 05.02.2024 ರಂದು 1 ನೇ ಆರೋಪಿಯ ಗ್ರಾಮಸ್ಥರು ಮೃತ ಉದಯಕುಮಾರ್ ರವರಿಗೆ ಕರೆ ಮಾಡಿ, 4 ನೇ ಆರೋಪಿಯು 1 ನೇ ಆರೋಪಿಯ ಮನೆಯಲ್ಲಿದ್ದಾರೆ ಎಂದು ತಿಳಿಸಿದರು. ನನ್ನ ತಮ್ಮ ಉದಯಕುಮಾರ್ 1 ನೇ ಆರೋಪಿಯ ಮನೆಗೆ ಹೋದನು. ಅಲ್ಲಿ 4 ನೇ ಆರೋಪಿಯನ್ನು 1 ನೇ ಆರೋಪಿಯೊಂದಿಗೆ ನೋಡಿ ಏಕೆ ಈ ರೀತಿ ಮಾಡುತ್ತಿಯಾ ಎಂದು ಕೇಳಿದಾಗ, ನಾನು ಹೀಗೆ ಮಾಡುತ್ತೇನೆ ಎಂದು 4 ನೇ ಆರೋಪಿ ಹೇಳಿದನು. ನಂತರ 1 ರಿಂದ 4 ನೇ ಆರೋಪಿತರು ಮೃತ ಉದಯಕುಮಾರ್ ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ನಂತರ ಮೃತ ಉದಯಕುಮಾರ್ ಈ ವಿಚಾರವನ್ನು ನನಗೆ ತಿಳಿಸಿದನು. ನಂತರ ಈ ವಿಚಾರವನ್ನು ನಾವು ಗ್ರಾಮಸ್ಥರಿಗೆ ತಿಳಿಸಿದೆವು. ನಂತರ ನನ್ನ ತಮ್ಮ ಊರಿಗೆ ಬಂದನು. 1 ನೇ ಆರೋಪಿಯು ನನ್ನ ತಮ್ಮನ ವಿರುದ್ಧ ಪೋಲೀಸರಿಗೆ ದೂರು ಕೊಟ್ಟಿರುತ್ತಾರೆ. ಪೋಲೀಸರು 1 ನೇ ಆರೋಪಿ ಮತ್ತು ನನ್ನ ತಮ್ಮನನ್ನು ಠಾಣೆಗೆ ಕರೆಸಿದರು. ಪೋಲೀಸರು 1 ನೇ ಆರೋಪಿಗೆ ಬುದ್ದಿ ಹೇಳಿದರು. 1 ನೇ ಆರೋಪಿಯು ಅಲ್ಲಿಯೂ ಸಹ ಬಾಡಿಗೆ ಮಾಡಬೇಕೆಂದು ಹೇಳಿದಾಗ ನಮ್ಮ ಮನೆಯಲ್ಲೇ

ಮಧ್ಯಭಾಗಕ್ಕೆ ಗೋಡೆ ಹಾಕಿ 2 ಭಾಗ ಮಾಡುವಂತೆ ತೀರ್ಮಾನವಾಯಿತು. ಅದರಂತೆ ನಮ್ಮ ಮನೆಯಲ್ಲಿ ಒಂದು ಗೋಡೆ ಕಟ್ಟಿದೆವು. ಆದರೆ 1 ನೇ ಆರೋಪಿ ನನ್ನ ತಮ್ಮನೊಂದಿಗೆ ಬಂದು ವಾಸವಿರಲಿಲ್ಲ. ಆಕೆ ತನ್ನ ತಂದೆ ತಾಯಿ ಮನೆಯಲ್ಲೇ ವಾಸವಿದ್ದಳು. 1 ರಿಂದ 3 ನೇ ಆರೋಪಿತರು ನನ್ನ ತಮ್ಮನಿಗೆ ನೀನು ಬದುಕಿರುವುದಕ್ಕಿಂತ ಸಾಯುವುದೇ ಲೇಸು ಎಂದು ಹೇಳುತ್ತಿದ್ದರು. ನನ್ನ ತಮ್ಮ ನಮ್ಮ ಊರಿನಲ್ಲೇ ಇದ್ದನು. ದಿಃ 07.03.2024 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ಊರಿನಲ್ಲೇ ಇದ್ದನು ನಂತರ ಕಾಣಿಸಲಿಲ್ಲ. ಮರುದಿನ ನನ್ನ ತಮ್ಮ ಅಜ್ಜಿಪುರ ಗ್ರಾಮದ ಕಣಿವೆ ಆಂಜನೇಯ ದೇವಸ್ಥಾನದ ಬಳಿ ಮರಕ್ಕೆ ನೇಣು ಹಾಕಿಕೊಂಡಿದ್ದಾನೆ ಎಂದು ಗೊತ್ತಾಯಿತು. ನಂತರ ನಾನು ಮತ್ತು ಗ್ರಾಮಸ್ಥರು ಹೋಗಿ ನೋಡಿದಾಗ ನನ್ನ ತಮ್ಮ ಮರಕ್ಕೆ ನೇಣು ಹಾಕಿಕೊಂಡಿರುವುದು ಕಂಡು ಬಂತು. ತನ್ನ ನೈಟ್ ಪ್ಯಾಂಟ್ ಮೂಲಕ ನೇಣು ಹಾಕಿಕೊಂಡಿದ್ದನು.

ನಂತರ ನಾನು ಪೋಲೀಸರಿಗೆ ದೂರು ಕೊಟ್ಟಿರುತ್ತೇನೆ. ಪಿರ್ಯಾದಿಯನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಂತರ ಪೋಲೀಸರು ಬೆಳಗ್ಗೆ 11.30 ರಿಂದ 12.30 ರವರೆಗೆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದರು. ಚಾಸಾ 14 ರಿಂದ 16 ರವರು ಪಂಚರಾಗಿ ಹಾಜರಿದ್ದರು. ಮಹಜರ್ ಸಮಯದಲ್ಲಿ ಪೋಲೀಸರು ಮೃತ ದೇಹವನ್ನು ಪರಿಶೀಲಿಸಿದಾಗ ಆತನ ಒಳಉಡುಪಿನಲ್ಲಿ ಒಂದು ಪತ್ರ ಇತ್ತು. ಸದರಿ ಪತ್ರದಲ್ಲಿ ನನ್ನ ಸಾವಿಗೆ ಆರೋಪಿತರೇ ಕಾರಣ ಎಂಬ ಬರಹ ಇತ್ತು. ಸದರಿ ಪತ್ರದಲ್ಲಿ ನನ್ನ ತಮ್ಮನ ಸಹಿ ಇತ್ತು. ಪೋಲೀಸರು ಸದರಿ ಪತ್ರವನ್ನು ವಶಪಡಿಸಿಕೊಂಡರು. ನಾನು ಸ್ಥಳದಲ್ಲಿ ಪತ್ರವನ್ನು ನೋಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಸದರಿ ಪತ್ರವನ್ನು ಗುರುತಿಸಿದ್ದು, ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 2 ರಲ್ಲಿ ಮೃತನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮೃತನ ಚಪ್ಪಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಮಹಜರ್ ಅನ್ನು ನಿಪಿ 3 ಎಂದು ಸಾಕ್ಷಿ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು.

ನಂತರ ಪೋಲೀಸರು ಮೃತನ ದೇಹವನ್ನು ಮರದಿಂದ ಇಳಿಸಿ ಆಸ್ಪತ್ರೆಗೆ ಸಾಗಿಸಿದ್ದರು. ದಿಃ 23.05.2024 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ

ಪೋಲೀಸರ ಕೋರಿಕೆಯಂತೆ 2 ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಪೋಲೀಸರು ಮಹಜರ್ ಮೂಲದ ಸದರಿ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡರು. ಆ ಸಮಯದಲ್ಲಿ ಚಾಸಾ 17 ಮತ್ತು 18 ರವರು ಹಾಜರಿದ್ದರು. ಮಹಜರ್ ಅನ್ನು ನಿಪಿ 4 ಎಂದು ಸಾಕ್ಷಿ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಹಾಜರುಪಡಿಸಿರುವ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ಮೃತನ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ನಿಪಿ 5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಗಳನ್ನು ನಿಪಿ 5(ಬಿ) ಮತ್ತು 6(ಬಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 7 ರಿಂದ 10 ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ಮತ್ತು ಶವ ಇದ್ದ ಭಾವಚಿತ್ರಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ನಿಪಿ 11 ರಿಂದ 24 ಎಂದು ಗುರುತಿಸಲಾಯಿತು.

ದಿಃ 02.07.2025 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ನನ್ನ ತಮ್ಮನ ಬ್ಯಾಂಕ್ ಖಾತೆ ಮತ್ತು ನನ್ನ ತಮ್ಮನ ವಿವಾಹ ಆಮಂತ್ರಣ ಪತ್ರಿಕೆಯನ್ನು, ಒಂದು ಕ್ರಯ ಪತ್ರವನ್ನು ಪೋಲೀಸರ ಮುಂದೆ ಹಾಜರುಪಡಿಸಿರುತ್ತೇನೆ. ಆಗ ಸಂಜೆ 5.00 ರಿಂದ 6.00 ಗಂಟೆ ಆಗಿತ್ತು. ಆ ಸಮಯದಲ್ಲಿ ಚಾಸಾ 20 ಮತ್ತು 21 ರವರು ಹಾಜರಿದ್ದರು. ಮಹಜರ್ ಅನ್ನು ನಿಪಿ 25 ಎಂದು ಸಾಕ್ಷಿ ಸಹಿಯನ್ನು ನಿಪಿ 25(ಎ) ಎಂದು ಗುರುತಿಸಲಾಯಿತು. ದಾಖಾಲಾತಿಗಳನ್ನು ನಿಪಿ 26 ಮತ್ತು 27 ಎಂದು ಗುರುತಿಸಲಾಯಿತು (ಲಗ್ನ ಪತ್ರಿಕೆ ಮತ್ತು ಆಮಂತ್ರಣ ಪತ್ರಿಕೆ). ಬ್ಯಾಂಕ್ ದಾಖಾಲಾತಿಗಳನ್ನು ನಿಪಿ 28 ಎಂದು ಗುರುತಿಸಲಾಯಿತು. ನಿಪಿ 26 ರಲ್ಲಿ ಮೃತನ ಸಹಿ ಇರುತ್ತದೆ. ಸಹಿಯನ್ನು ನಿಪಿ 26(ಎ) ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ಮುಂದುವರೆದ ಹೇಳಿಕೆ ಕೊಟ್ಟಿರುತ್ತೇನೆ.

ಈಗ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲಿದು ಸೀಲು ಮಾಡಿರುವ ವಸ್ತುಗಳನ್ನು ತೆರೆದು ನೋಡಲು ಅನುಮತಿ ಕೋರಿದ್ದು,ಅನುಮತಿ ನೀಡಲಾಯಿತು. ಸದರಿ ವಸ್ತುಗಳನ್ನು ತೆರೆದು ನೋಡಲಾಗಿ, ಅದರಲ್ಲಿದ್ದ ಒಂದು ನೈಟ್

ಪ್ಯಾಂಟ್ ಅನ್ನು ಮು.ಮಾ 2 ಎಂದು, ಸ್ಕಾರ್ಫ್ ಅನ್ನು ಮು.ಮಾ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಸಿ.ಎಂ.ಜೆ ವಕೀಲರಿಂದ**

ನನ್ನ ಗ್ರಾಮಕ್ಕೂ 1 ರಿಂದ 3 ನೇ ಆರೋಪಿತರ ಗ್ರಾಮಕ್ಕೂ ಸುಮಾರು 50 ಕಿ.ಮೀ ಅಂತರ ಇರುತ್ತದೆ. 3 ನೇ ವಿವಾಹ ಕಾರ್ಯವನ್ನು ಮಾಡಿರುತ್ತಾರೆ. ವಿವಾಹ ಸಮಯದಲ್ಲಿ 1 ನೇ ಆರೋಪಿಗೆ ಚಿನ್ನಾಭರಣಗಳನ್ನು ಕೊಟ್ಟಿದ್ದರು. ಮೃತನು ನಮ್ಮ ಗ್ರಾಮದಲ್ಲೇ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದನು. ಆತ ಸ್ವಂತ ಆಟೋವನ್ನು ಇಟ್ಟುಕೊಂಡಿದ್ದನು. ನನ್ನ ಗ್ರಾಮ ಕೊಳ್ಳೇಗಾಲದಿಂದ 6 ಕಿ.ಮೀ ಅಂತರ ಇರುತ್ತದೆ. ನಾನು ಕೊಳ್ಳೇಗಾಲ ಪಟ್ಟಣದಲ್ಲೂ ಆಟೋ ಚಾಲನೆ ಮಾಡುತ್ತೇನೆ. ಮೃತನು ಸಹಾ ಕೊಳ್ಳೇಗಾಲ ಪಟ್ಟಣದಲ್ಲಿ ಆಟೋ ಚಾಲನೆ ಮಾಡುತ್ತಿದ್ದನು. ನನ್ನದೇ ಬೇರೆ ಆಟೋ ಇತ್ತು. ನನ್ನ ತಮ್ಮನದೂ ಬೇರೆ ಆಟೋ ಇತ್ತು. 1 ನೇ ಆರೋಪಿಯ ವಿವಾಹವಾಗುವ ಸಮಯದಲ್ಲಿ ನಾನು ನನ್ನ ತಮ್ಮ, ನನ್ನ ತಾಯಿ ಎಲ್ಲರೂ ಒಟ್ಟಾಗಿ ಇದ್ದೆವು. ನನಗೆ ವಿವಾಹವಾಗಿ ಮಕ್ಕಳಿರುತ್ತಾರೆ. ನನ್ನ ತಮ್ಮ 8 ನೇ ತರಗತಿಯವರೆಗೆ ಅಗರ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ್ದನು. ಆತನ ವಿದ್ಯಾಭ್ಯಾಸದ ಬಗ್ಗೆ ಪೋಲೀಸರಿಗೆ ಹೇಳಿರುತ್ತೇನೆ. ವಿವಾಹವಾದ ನಂತರ 1 ನೇ ಆರೋಪಿ ನನ್ನ ತಮ್ಮನೊಂದಿಗೆ ವಾಸವಿದ್ದಳು. 2 ಮತ್ತು 3 ನೇ ಆರೋಪಿತರಿಗೆ 1 ನೇ ಆರೋಪಿ ನನ್ನ ತಮ್ಮನೊಂದಿಗೆ ಇರಬೇಕೆಂಬ ಆಸೆ ಇತ್ತು. 2 ಮತ್ತು 3 ನೇ ಆರೋಪಿತರು ನನ್ನ ತಮ್ಮ ಮತ್ತು 1 ನೇ ಆರೋಪಿಗೆ ಹಣಕಾಸಿನ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಮೊದಲಿನಿಂದಲೂ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿ. ಆತನಿಗೆ ಜೂಜು ಆಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ನನ್ನ ತಮ್ಮ ಮದ್ಯಪಾನ ಮಾಡಿಕೊಂಡು ಸರಿಯಾಗಿ ಸಂಪಾದನೆ ಮಾಡದೇ 1 ನೇ ಆರೋಪಿಗೆ ತೊಂದರೆ ಕೊಡುತ್ತಿದ್ದನು ಎಂದರೆ ಸರಿಯಲ್ಲ. ಮೃತನು 1 ನೇ ಆರೋಪಿಯ ಆಭರಣಗಳನ್ನು ಅಡವಿಟ್ಟಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿ ಮಗುವಿಗೆ ಜನನ ನೀಡಿದಾಗ 2 ಮತ್ತು 3 ನೇ ಆರೋಪಿತರೇ ಆಕೆಯನ್ನು ಆರೈಕೆ ಮಾಡಿರುತ್ತಾರೆ. ಮಗು ಜನಿಸಿದ ನಂತರ 1 ನೇ ಆರೋಪಿ ನಮ್ಮ ಮನೆಗೆ ಮತ್ತೆ ಬರಲಿಲ್ಲ. ನಾನು ಒಂದು ಬಾರಿ ಆಕೆಯನ್ನು ಮನೆಗೆ

ಕರೆಯಲು ಹೋಗಿದ್ದೆ. ಮಗು ಜನಿಸಿದ 2 ತಿಂಗಳ ನಂತರ ಮನೆಗೆ ಕರೆಯಲು ಹೋಗಿದ್ದೆ. ನಂತರ ನಾನು ಆಕೆಯನ್ನು ಮನೆಗೆ ಕರೆಯಲು ಪ್ರಯತ್ನಪಡಲಿಲ್ಲ. 1 ನೇ ಆರೋಪಿ ಮತ್ತು ಮೃತನ ನಡುವೆ ಗಂಡ ಹೆಂಡತಿ ಸಂಬಂಧ ಮುರಿದು ಹೋಗಿತ್ತು ಎಂದರೆ ಸರಿಯಲ್ಲ. 1 ನೇ ಆರೋಪಿ ಮಗುವಿನೊಂದಿಗೆ ನಮ್ಮ ಮನೆಯಲ್ಲಿ ಒಂದು ತಿಂಗಳ ಕಾಲ ಇದ್ದಳು. ಆ ಸಮಯದಲ್ಲೂ ಗಂಡ ಹೆಂಡತಿ ನಡುವೆ ಜಗಳ ಆಗುತ್ತಿತ್ತು. ನನ್ನ ತಮ್ಮ ಆಗಾಗ 1 ನೇ ಆರೋಪಿಯ ಮನೆಗೆ ಹೋಗುತ್ತಿರಲಿಲ್ಲ, ಮತ್ತು ಸಂಪೂರ್ಣವಾಗಿ ಆಕೆಯನ್ನು ಬಿಟ್ಟುಬಿಟ್ಟಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿ ನಮ್ಮ ಮನೆಯಿಂದ ತನ್ನ ತವರು ಮನೆಗೆ ಹೋದ ನಂತರ ನಾನು ಆಕೆಯನ್ನು ಕರೆಯಲು ಅವರ ಮನೆಗೆ ಯಾವತ್ತೂ ಹೋಗಿರುವುದಿಲ್ಲ.

ಜನೇವರಿ 05, 2024 ರಂದು ನನ್ನ ತಮ್ಮ 1 ನೇ ಆರೋಪಿಯೊಂದಿಗೆ ಜಗಳ ಮಾಡಿ ಆಕೆಗೆ ಹಲ್ಲೆ ಮಾಡಿದ್ದಾನೆ ಎಂದು 1 ನೇ ಆರೋಪಿ ಪೋಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನಾಗಲೀ ನನ್ನ ತಮ್ಮನಾಗಲೀ ಆ ಸಮಯದಲ್ಲಿ ಪೋಲೀಸರಿಗೆ ದೂರು ಕೊಟ್ಟಿರುವುದಿಲ್ಲ. ದಿಃ 06.02.2024 ರಂದು ಪೋಲಿಸರು ನನ್ನ ತಮ್ಮನನ್ನು ಠಾಣೆಗೆ ಕರೆಸಿದ್ದಾಗ ನಾನು ಆತನೊಂದಿಗೆ ಹೊಗಿದ್ದೆ. ಆ ಸಮಯದಲ್ಲಿ ನನ್ನ ತಮ್ಮ ಪೋಲೀಸರಿಗೆ ನಾನು 1 ನೇ ಆರೋಪಿಯೊಂದಿಗೆ ಗಲಾಟೆ ಮಾಡುವುದಿಲ್ಲ ಆಕೆಗೆ ತೊಂದರೆ ಕೊಡುವುದಿಲ್ಲ ಎಂದು ಮುಚ್ಚಳಿಕೆಯನ್ನು ಬರೆದು ಕೊಟ್ಟಿದ್ದನು ಎಂದರೆ ಸರಿ. ನಂತರವೂ 1 ನೇ ಆರೋಪಿ ನನ್ನ ತಮ್ಮನೊಂದಿಗೆ ಸಂಸಾರ ಮಾಡಲಿಲ್ಲ. ನಾನು ಪೋಲೀಸರಿಗೆ ಬರವಣಿಗೆಯಲ್ಲಿ ಯಾವುದೇ ದಾಖಲೆಯನ್ನು ಆ ದಿನ ಕೊಟ್ಟಿರುವುದಿಲ್ಲ. ಆ ಸಮಯಕ್ಕೆ ನನ್ನ ಮತ್ತು ನನ್ನ ತಮ್ಮನ ನಡುವೆ ಭಾಗ ಆಗಿತ್ತು. ನನ್ನ ತಮ್ಮನ ಭಾಗಕ್ಕೆ ಒಂದು ನಿವೇಶನವನ್ನು ಕೊಟ್ಟಿದ್ದೆ ಮನೆ ಕೊಟ್ಟಿರಲಿಲ್ಲ. ಮನೆ ನನ್ನ ಭಾಗಕ್ಕೆ ಬಂದಿತ್ತು. ನನ್ನ ತಮ್ಮ ಹಲವಾರು ಬಾರಿ ಗ್ರಾಮಕ್ಕೆ ಬರದೇ ಕೊಳ್ಳೆಗಾಲದಲ್ಲೇ ಉಳಿದುಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ. ನನ್ನ ತಮ್ಮ ಕೊಳ್ಳೇಗಾಲದಲ್ಲಿ ಹಲವಾರು ಜನರ ಬಳಿ ಕೈ ಸಾಲ ಮಾಡಿದ್ದನು ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಪೊ.ಠಾಣೆಗೆ ಹೋಗಿ ಬಂದ ನಂತರ ನನ್ನ ತಮ್ಮ ದಿನನಿತ್ಯದ ಕೆಲಸ ಮಾಡುತ್ತಿದ್ದನು. ಪೊ.ಠಾಣೆಗೆ ಹೋಗಿ ಬಂದ ನಂತರ ನನ್ನ ತಮ್ಮ 1 ನೇ ಆರೋಪಿಯ ಮನೆಗೆ ಹೋಗಿರಲಿಲ್ಲ. 1 ರಿಂದ 3 ನೇ ಆರೋಪಿತರು ನಮ್ಮ ಮನೆಗೆ ಬರಲಿಲ್ಲ.

ನನ್ನ ಮತ್ತು ನನ್ನ ತಮ್ಮನ ನಡುವೆ ಆಸ್ತಿ ಭಾಗದ ವಿಚಾರವಾಗಿ ವೈ ಮನಸ್ಸು ಇತ್ತು ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಊರಿನಲ್ಲಿ ಮನೆ ಇರಲಿಲ್ಲ ಮತ್ತು ಜವಾಬ್ದಾರಿ ಇರಲಿಲ್ಲ, ಆ ಕಾರಣಕ್ಕಾಗಿ 1 ನೇ ಆರೋಪಿ ನನ್ನ ತಮ್ಮನಿಂದ ಬೇರೆ ಇದ್ದಳು ಮತ್ತು 1 ನೇ ಆರೋಪಿಗೆ ನನ್ನ ತಮ್ಮ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಡುತ್ತಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಮತ್ತು 4 ನೇ ಆರೋಪಿಯ ನಡುವೆ ಯಾವುದೇ ಅಕ್ರಮ ಸಂಬಂಧ ಇರಲ್ಲಿಲ್ಲ ಎಂದರೆ ಸರಿಯಲ್ಲ. ಅಕ್ರಮ ಸಂಬಂದಕ್ಕೆ ಸಂಬಂಧಿಸಿದಂತೆ ಯಾವುದೇ ಪಂಚಾಯಿತಿ ಆಗಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ 3 ರಿಂದ 8 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ 17 ಮತ್ತು 19 ರವರು ನನ್ನ ಸ್ನೇಹಿತರು ಹಾಗಾಗಿ ಅವರು ಪರಿಚಯ.

ನನ್ನ ತಮ್ಮ ನೇಣು ಹಾಕಿಕೊಂಡಿದ್ದ ಜಾಗಕ್ಕೂ ನಮ್ಮ ಊರಿಗೂ ಸುಮರಾರು 45 ಕಿ.ಮೀ ಅಂತರ ಇರುತ್ತದೆ. ನನ್ನ ತಮ್ಮ ಗ್ರಾಮದಿಂದ ಹೊಗುವಾಗ ಆಟೋ ಮನೆಯಲ್ಲೇ ಇತ್ತು ನಮಗೆ ಎಲ್ಲಿಗೆ ಹೋಗುತ್ತೇನೆ ಎಂದು ಹೇಳಿರಲಿಲ್ಲ. ಅಜ್ಜಿಪುರದ ಗ್ರಾಮಸ್ಥರು ನನಗೆ ದೂರವಾಣಿ ಕರೆ ಮಾಡಿದ್ದರು. ಅವರು ಯಾರು ಎಂದು ಗೊತ್ತಿಲ್ಲ. ಮೃತನ ಬಳಿ ಯಾವುದೇ ಪತ್ರ ಇರಲಿಲ್ಲ. ನಿಪಿ 2 ಅನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ 1 ರ ವಿಚಾರವನ್ನು ಠಾಣೆಯಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ಪೋಲೀಸರು ಸ್ಥಳಕ್ಕೆ ಬರುವ ಮೊದಲು ನಮ್ಮ ಗ್ರಾಮಸ್ಥರು ಸ್ಥಳದಲ್ಲಿದ್ದರು. ಅಜ್ಜಿಪುರ ಗ್ರಾಮಸ್ಥರು ಸ್ಥಳದಲ್ಲಿ ಇದ್ದರು. 1 ಮತ್ತು 3 ನೇ ಆರೋಪಿತರ ಆಸ್ತಿ ಸಂಪಾದಿಸಲು ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ಮತ್ತು 6 ಅನ್ನು ಪೋಲಿಸರ ಮಾತು ಕೇಳಿ ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೃತನು ತನ್ನ ಸ್ವ ಇಚ್ಚೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಮೃತನ ಸಾವಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೃತನು ಮೃತಪಟ್ಟ ನಂತರ ಆರೋಪಿತರಿಗೆ ನಾನು ವಿಷಯ ತಿಳಿಸಿರುವುದಿಲ್ಲ. ಪೋಲೀಸರು ಬಂದು ಮಹಜರ್ ಕ್ರಮ ಜರುಗಿಸಿ ಮೃತನ ಅಂತ್ಯಕ್ರಿಯೆ ಆಗುವವರಗೊ 1 ಮತ್ತು 3 ನೇ ಆರೋಪಿತರಿಗೆ

ವಿಷಯ ತಿಳಿಸಿರುವುದಿಲ್ಲ. ಮೃತನು ಹಲವಾರು ಬಳಿ ಸಾಲ ಮಾಡಿಕೊಂಡಿದ್ದು ಆ ಕಾರಣಕ್ಕಾಗಿ ತಾನೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 4 ನೇ ಆರೋಪಿಯ ಪರವಾಗಿ ಪಿ.ಕೆ.ಎಸ್ ವಕೀಲರಿಂದ**

4 ನೇ ಆರೋಪಿಯು ಹಿತ್ತಲುದೊಡ್ಡಿ ಗ್ರಾಮದ ತೋಟದ ಮನೆಯಲ್ಲಿ ವಾಸವಿರುತ್ತಾನೆ ಎಂದರೆ ಸರಿ. ಆತ ನಮಗೆ ಸಂಬಂಧಿಕನಲ್ಲ. 4 ನೇ ಆರೋಪಿಯು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿರಲಿಲ್ಲ. 1 ಮತ್ತು 4 ನೇ ಆರೋಪಿಯ ನಡುವೆ ಅಕ್ರಮ ಸಂಬಂಧ ಇದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಅವರಿಬ್ಬರ ನಡುವೆ ಯಾವುದೇ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ